(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಚಂದ್ರಮೌಳಿ ಕೆ.ಆರ್. ಪ್ರಸಾದ್ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಸಿ. ಘೋಷ್

ಅರಣೇಶ್ ಕುಮಾರ್ -ವಿರುದ್ಧ-ಬಿಹಾರ ರಾಜ್ಯ ಸರ್ಕಾರ ಮತ್ತು ಮತ್ತೊಬ್ಬರು

ಕ್ರಿಮಿನಲ್ ಅಪೀಲುಸಂಖ್ಯೆ: 1277/2014,ದಿನಾಂಕ: 2 ನೇ ಜುಲೈ, 20

ತೀರ್ಪು

ನ್ಯಾಯಮೂರ್ತಿ ಶ್ರೀ ಚಂದ್ರಮೌಳಿ ಕೆ.ಆರ್. ಪ್ರಸಾದ್:

ಅರ್ಜಿದಾರನು ಭಾರತ ದಂಡ ಸಂಹಿತೆ, 1860 ರ (ಇನ್ನು ಮುಂದೆ ' ಐ.ಪಿ.ಸಿ ' ಎಂದು ಕರೆಯಲಾಗುತ್ತದೆ) ಪ್ರಕರಣ 498- ಎ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮ, 1961 ರ ಪ್ರಕರಣ 4 ರ ಅಡಿಯಲ್ಲಿನ ಮೊಕದ್ದಮೆಯಲ್ಲಿ ತನ್ನ ಬಂಧನದ ಭೀತಿಯನ್ನು ಹೊಂದಿದ್ದಾನೆ.ಐ.ಪಿ.ಸಿ. ಸೆಕ್ಷನ್ 498- ಎ ಅಡಿಯಲ್ಲಿ ನೀಡಲಾದ ಗರಿಷ್ಠ ಶಿಕ್ಷೆಯು, ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಗೆ ಕಾರಾಗೃಹವಾಸ ಮತ್ತು ಜುಲ್ಮಾನೆಯಾಗಿದ್ದು, ವರದಕ್ಷಿಣೆ ನಿಷೇಧ ಅಧಿನಿಯಮದ ಪ್ರಕರಣ 4 ರ ಅಡಿಯಲ್ಲಿ ನೀಡಲಾದ ಗರಿಷ್ಠ ಶಿಕ್ಷೆಯು ಎರಡು ವರ್ಷಗಳ ಕಾರಾಗೃಹವಾಸ ಮತ್ತು ಜುಲ್ಮಾನೆಯಾಗಿದೆ.

2. ಅರ್ಜಿದಾರನು ಪ್ರತ್ಯರ್ಜಿದಾರ -2 ಆದ ಶ್ವೇತಾಕಿರಣ್ ಅವರ ಪತಿ, ಅವರ ವಿವಾಹವು 1.7.2007 ರಂದು ಶಾಸ್ತ್ರೋಕ್ತವಾಗಿ ನೆರವೇರಿದೆ.ಅವನ ನಿರೀಕ್ಷಣಾ ಜಾಮೀನು ಪಡೆಯುವ ಯತ್ನ ವಿಫಲವಾಗಿದೆ. ಆದ್ದರಿಂದ ಅವನು ಅಪೀಲು ಮಾಡಲು ವಿಶೇಷ ಅನುಮತಿ ಕೋರಿ ಈ ನ್ಯಾಯಾಲಯದ ಮೊರೆ ಹೋಗಿದ್ದಾನೆ.ಅನುಮತಿ ನೀಡಲಾಗಿದೆ.

3. ಸಾರಾಂಶದಲ್ಲಿ, ಅಪೀಲುದಾರನ ವಿರುದ್ಧ ಅವನ ಪತ್ನಿಯು ಎಂಟು ಲಕ್ಷ ರೂ.ಗಳು, ಮಾರುತಿಕಾರು, ಏರ್ ಕಂಡೀಷನರು, ಟೆಲಿವಿಷನ್ ಸೆಟ್ ಇತ್ಯಾದಿಗಳ ಬೇಡಿಕೆಯನ್ನು ಅವಳ ಅತ್ತೆ ಮತ್ತು ಮಾವ ಇಟ್ಟಿದ್ದರೆಂದು ಆಪಾದಿಸಿದ್ದಾಳೆ.ಮತ್ತು ಈ ಸಂಗತಿಯನ್ನು ಅಪೀಲುದಾರನ ಗಮನಕ್ಕೆ ತಂದಾಗ, ಅವನು ತನ್ನ ತಾಯಿಯನ್ನು ಸಮರ್ಥಿಸಿಕೊಂಡಿದ್ದಾನೆ ಹಾಗೂ ತಾನು ಇನ್ನೊಬ್ಬ ಹೆಣ್ಣನ್ನು ಮದುವೆಯಾಗುವುದಾಗಿ ಹೆದರಿಸಿದ್ದಾನೆ.ವರದಕ್ಷಿಣೆ ಬೇಡಿಕೆಯನ್ನು ನೆರವೇರಿಸದಿದ್ದ ಕಾರಣ, ಅವಳನ್ನು ಅತ್ತೆ ಮನೆಯಿಂದ ಹೊರಗಟ್ಟಿದ್ದಾರೆ.ಅಪೀಲುದಾರನು ಈ ಆಪಾದನೆಗಳನ್ನು ನಿರಾಕರಿಸಿ, ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದು, ಅದು ಮೊದಲು ಮಾನ್ಯ ಸೆಷನ್ಸ್ ನ್ಯಾಯಾಧೀಶರಿಂದ ಹಾಗೂ ಆ ನಂತರ ಉಚ್ಚ ನ್ಯಾಯಾಲಯದಿಂದ ತಿರಸ್ಕೃತಗೊಂಡಿದೆ.

4. ಇತ್ತೀಚಿನ ವರ್ಷಗಳಲ್ಲಿ ವೈವಾಹಿಕ ವಿವಾದಗಳು ಸ್ಪಷ್ಟವಾಗಿ ಗೋಚರಿಸುವಷ್ಟು ಹೆಚ್ಚಾಗುತ್ತಿವೆ.ವಿವಾಹ ವ್ಯವಸ್ಥೆಯನ್ನು ಈ ರಾಷ್ಟ್ರದಲ್ಲಿ ಅತ್ಯಂತ ಪವಿತ್ರವಾದುದೆಂದು ಭಾವಿಸುತ್ತಾರೆ.ಮಹಿಳೆಗೆ ತನ್ನ ಪತಿ ಮತ್ತು ಅವನ ಸಂಬಂಧಿಕರಿಂದಾಗುವ ಕಿರುಕುಳದ ವಿರುದ್ಧ ಹೋರಾಡುವ ಸ್ಪಷ್ಟ ಉದ್ದೇಶದೊಂದಿಗೆ ಐ.ಪಿ.ಸಿ. ಸೆಕ್ಷನ್ 498- ಎ ಯನ್ನು ಪರಿಚಯಿಸಲಾಯಿತು.ಐ.ಪಿ.ಸಿ. ಸೆಕ್ಷನ್ 498- ಎ ಸಂಜ್ಞೇಯವಾದ ಮತ್ತು ಜಾಮೀನುರಹಿತ

ಅಪರಾಧವೆಂಬ ಸಂಗತಿಯ ಕಾರಣದಿಂದಾಗಿ, ಅತೃಪ್ತ ಪತ್ನಿಯರು ಈ ಉಪಬಂಧಗಳನ್ನು ರಕ್ಷಣೆಯಾಗಿ ಬಳಸುವುದಕ್ಕಿಂತ ಆಯುಧಗಳನ್ನಾಗಿ ಬಳಸುವಂಥ ಅಹಂಕಾರದ ನಂಬಲಾಗದ ಸ್ಥಿತಿಯನ್ನು ತಲುಪಿದೆ.ಕಿರುಕುಳ ನೀಡುವ ಸುಲಭವಾದ ದಾರಿಯೆಂದರೆ, ಪತಿ ಮತ್ತು ಅವನ ಸಂಬಂಧಿಕರನ್ನು ಈ ಉಪಬಂಧದ ಅಡಿಯಲ್ಲಿ ಬಂಧಿಸುವಂತೆ ಮಾಡುವುದು.ಸುಮಾರು ಸಂಖ್ಯೆಯ ಪ್ರಕರಣಗಳಲ್ಲಿ, ಹಾಸಿಗೆ ಹಿಡಿದಿರುವ, ಪತಿಯ ತಾತಂದಿರು ಮತ್ತು ಅಜ್ಜಿಯರು, ದಶಕಗಳಿಂದ ವಿದೇಶದಲ್ಲಿ ನೆಲೆಸಿರುವ ಅವನ ಅಕ್ಕ ತಂಗಿಯರು ಬಂಧಿತರಾಗಿದ್ದಾರೆ.  ಗೃಹವ್ಯವಹಾರಗಳ ಮಂತ್ರಾಲಯ, ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗವು ಪ್ರಕಟಿಸಿದ ಭಾರತದಲ್ಲಿ ಅಪರಾಧ 2012 ರ ಅಂಕಿಅಂಶಗಳು " ಐ.ಪಿ.ಸಿ. ಸೆಕ್ಷನ್ 498- ಎ ಅಡಿಯಲ್ಲಿ ಅಪರಾಧಕ್ಕಾಗಿ 2012 ರ ವರ್ಷದ ಅವಧಿಯಲ್ಲಿ ಭಾರತದಾದ್ಯಂತ 1,97,762 ವ್ಯಕ್ತಿಗಳ ಬಂಧನವನ್ನು ತೋರಿಸುತ್ತದೆ.ಇದು 2011 ರ ವರ್ಷಕ್ಕಿಂತ ಶೇ. 9.4 ಹೆಚ್ಚಾಗಿದೆ.2012 ರಲ್ಲಿ ಈ ಉಪಬಂಧದ ಅಡಿಯಲ್ಲಿ ಬಂಧಿತರಾದವರಲ್ಲಿ ಸುಮಾರು ಕಾಲುಭಾಗದಷ್ಟು ಮಂದಿ ಮಹಿಳೆಯರು; ಅಂದರೆ, 47,951 ಜನ ಮಹಿಳೆಯರಿದ್ದು, ಇದು ಪತಿಯರ ತಾಯಂದಿರು ಮತ್ತು ಅಕ್ಕತಂಗಿಯರನ್ನು ಬಂಧನದ ವ್ಯಾಪ್ತಿಗೆ ಉದಾರವಾಗಿ ಸೇರಿಸಲಾಯಿತೆಂಬುದನ್ನು ನಿರೂಪಿಸುತ್ತದೆ.ಅದರ ಪಾಲು, ದಂಡಸಂಹಿತೆ ಅಡಿಯಲ್ಲಿ ಮಾಡಲಾದ ಅಪರಾಧಗಳ ಅಡಿಯಲ್ಲಿ ಬಂಧಿತರಾದ ಒಟ್ಟು ವ್ಯಕ್ತಿಗಳ ಶೇ .6 ರಷ್ಟಿದೆ.ಇದು ಭಾರತ ದಂಡಸಂಹಿತೆಯ ವಿವಿಧ ಪ್ರಕರಣಗಳ ಅಡಿಯಲ್ಲಿ ಮಾಡಲಾದ ಒಟ್ಟು ಅಪರಾಧಗಳ ಶೇ .45 ಕ್ಕೆ ಸಮನಾಗಿದ್ದು, ಕಳ್ಳತನ ಮತ್ತು ಗಾಯವನ್ನು ಹೊರತುಪಡಿಸಿ ಯಾವುದೇ ಇತರ ಅಪರಾಧಗಳಿಗಿಂತ ಹೆಚ್ಚಾಗಿದೆ.ಐ.ಪಿ.ಸಿ. ಸೆಕ್ಷನ್ 498- ಎ ಅಡಿಯಲ್ಲಿ ಪ್ರಕರಣವನ್ನು ದೋಷಾರೋಪಗೊಳಿಸುವ ಪ್ರಮಾಣವು ಶೇ. 93.6 ರಷ್ಟು ಹೆಚ್ಚಿದ್ದು, ದೋಷ ನಿರ್ಣಯದ ಪ್ರಮಾಣವು ಕೇವಲ ಶೇ .15 ರಷ್ಟು ಮಾತ್ರವಿದ್ದು, ಅದು ಎಲ್ಲಾ ಶೀರ್ಷಿಕೆಗಳ ಎದುರಿಗೆ ಅತ್ಯಂತ ಕಡಿಮೆಯಿದೆ.3,72,706 ಪ್ರಕರಣಗಳು ಅಧಿವಿಚಾರಣೆಗೆ ಬಾಕಿಯಿದ್ದು, ಅದರಲ್ಲಿ ಪ್ರಸ್ತುತ ಅಂದಾಜಿನ ಮೇಲೆ ಸುಮಾರು 3,17,000 ಬಿಡುಗಡೆಯಾಗುವ ನಿರೀಕ್ಷೆಯಿದೆ.

5. ಬಂಧನದಿಂದ ಅವಮಾನವಾಗುತ್ತದೆ, ಅದು ಸ್ವಾತಂತ್ರ್ಯವನ್ನು ಕಡಿಮೆ ಮಾಡುತ್ತದೆ ಮತ್ತು ಎಂದೆಂದಿಗೂ ಮರೆಯಲಾಗದ ದುಃಖವನ್ನು ತಂದೊಡ್ಡುತ್ತದೆ.ಶಾಸನಕಾರರು ಇದನ್ನು ಬಲ್ಲರು.ಹಾಗೆಯೇ ಪೊಲೀಸರಿಗೂ ಇದು ತಿಳಿದಿರುತ್ತದೆ.ಶಾಸನಕಾರರು ಮತ್ತು ಪೊಲೀಸರ ನಡುವೆ ಸಮರವೇ ನಡೆದಿದೆ ಮತ್ತು ಪೊಲೀಸರು ಇದರಿಂದ ಪಾಠ ಕಲಿತಿಲ್ಲವೆಂದು ಕಾಣುತ್ತದೆ.ಈ ಪಾಠವು ದಂಡಪ್ರಕ್ರಿಯಾ ಸಂಹಿತೆಯಲ್ಲಿ ಸೂಚಿತವಾಗಿದೆ.ಹಾಗೂ ಅದರಲ್ಲಿ ಒಳಗೊಂಡಿದೆ.ಸ್ವಾತಂತ್ರ್ಯ ದೊರೆತು ಆರು ದಶಕಗಳಾದರೂ ಇದು ತನ್ನ ವಸಾಹತುಶಾಹಿ ಧೋರಣೆಯಿಂದ ಹೊರಬಂದಿಲ್ಲ.ಇದನ್ನು ಹೆಚ್ಚಾಗಿ ಕಿರುಕುಳ ನೀಡುವ, ಬಲಾತ್ಕಾರ ಮಾಡುವ ಸಾಧನವನ್ನಾಗಿ ಪರಿಗಣಿಸಲಾಗಿದೆಯೇ ಹೊರತು ಜನಸ್ನೇಹಿಯನ್ನಾಗಿ ಖಂಡಿತವಾಗಿಯೂ ಪರಿಗಣಿಸಿಲ್ಲ.ಬಂಧನದ ತೀಕ್ಷ್ಣ ಅಧಿಕಾರವನ್ನು ಚಲಾಯಿಸುವಲ್ಲಿ ಎಚ್ಚರಿಕೆಯ ಅಗತ್ಯತೆಯನ್ನು ನ್ಯಾಯಾಲಯಗಳು ಒತ್ತಿ ಹೇಳಿವೆ.ಆದರೆ, ಅಪೇಕ್ಷಿತ ಫಲಿತಾಂಶ ಬಂದಿರುವುದಿಲ್ಲ.ಬಂಧಿಸುವ ಅಧಿಕಾರವು, ಅಧಿಕಾರದ ಮದಕ್ಕೆ ಹೆಚ್ಚು ಕಾರಣವಾಗುವ ಹಾಗೆಯೇ ಅದನ್ನು ಪರಿಶೀಲಿಸುವ ಮ್ಯಾಜಿಸ್ಟ್ರಸಿಯ ವಿಫಲತೆಗೂ ಸಹ ಕಾರಣವಾಗುತ್ತದೆ.ಇದಷ್ಟೇ ಅಲ್ಲದೆ, ಬಂಧನದ ಅಧಿಕಾರವು ಪೊಲೀಸ್ ಭ್ರಷ್ಟಾಚಾರದ ಅನ್ಯಾಯದ ಸಂಪಾದನೆಯ ಮೂಲಗಳಲ್ಲಿ ಒಂದಾಗಿದೆ.ಮೊದಲು ಬಂಧಿಸಿ, ಆ ನಂತರ ಉಳಿದ ಪ್ರಕ್ರಿಯೆಗಳನ್ನು ನಡೆಸುವುದು ತುಚ್ಛವಾದ ವರ್ತನೆ.ಸಂವೇದನೆಯನ್ನು ಕಳೆದುಕೊಂಡಿರುವ ಅಥವಾ ಪರೋಕ್ಷ ಪ್ರೇರಣೆಯಿಂದ ವರ್ತಿಸುವ ಪೊಲೀಸ್ ಅಧಿಕಾರಿಗಳಿಗೆ ಇದು ಸುಲಭದ ಸಾಧನವಾಗಿಬಿಟ್ಟಿದೆ.

6. ಕಾನೂನು ಆಯೋಗಗಳು, ಪೊಲೀಸ್ ಆಯೋಗಗಳು ಮತ್ತು ಈ ನ್ಯಾಯಾಲಯ, ಹೆಚ್ಚಿನ ಸಂಖ್ಯೆಯ ತೀರ್ಪುಗಳಲ್ಲಿ, ಬಂಧನದ ಅಧಿಕಾರವನ್ನು ಚಲಾಯಿಸುವಾಗ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ವ್ಯವಸ್ಥೆಯ ನಡುವಣ ಸಮತೋಲನವನ್ನು ಕಾಪಾಡಿಕೊಳ್ಳುವ ಅಗತ್ಯತೆಯನ್ನು ಒತ್ತಿ ಹೇಳಿವೆ.ಪೊಲೀಸ್ ಅಧಿಕಾರಿಗಳು ತಾವು ಹಾಗೆ ಬಂಧಿಸಲು ಅಧಿಕಾರವನ್ನು ಹೊಂದಿರುವುದಾಗಿ ನಂಬಿರುವ ಕಾರಣ ಅವರು ಬಂಧಿಸುತ್ತಾರೆ.ಬಂಧನದಿಂದ ಸ್ವಾತಂತ್ರ್ಯ ಕಡಿಮೆಯಾಗುವ, ಅವಮಾನವಾಗುವ ಮತ್ತು ಅದರ ಕಹಿನೆನಪು ಎಂದೆಂದೂ ಉಳಿಯುವ ಕಾರಣದಿಂದ ಅದನ್ನು ನಾವು ಬೇರೆ ರೀತಿಯಲ್ಲಿ ಯೋಚಿಸುತ್ತೇವೆ.ಅಪರಾಧವು ಜಾಮೀನುರಹಿತ ಮತ್ತು ಸಂಸ್ಥೆಯವಾಗಿರುವ ಕಾರಣದಿಂದ ಮಾತ್ರವೇ ಯಾರನ್ನೂ ಬಂಧಿಸತಕ್ಕದ್ದಲ್ಲ.ಮತ್ತು ಆದ್ದರಿಂದ ಪೊಲೀಸ್ ಅಧಿಕಾರಿಗಳು ಹಾಗೆ ಮಾಡುವುದು ನ್ಯಾಯಸಮ್ಮತವಾಗಿದೆಯೆಂದು ನಾವು ನಂಬುತ್ತೇವೆ.ಬಂಧಿಸುವ ಅಧಿಕಾರದ ಅಸ್ತಿತ್ವವು ಒಂದು ವಿಷಯವಾದರೆ, ಅದರ ಚಲಾವಣೆಗಾಗಿ ಸಮರ್ಥನೆಯು ಪೂರ್ತಿ ಬೇರೆಯದೇ ವಿಷಯವಾಗಿದೆ.ಬಂಧಿಸುವ ಅಧಿಕಾರವನ್ನು ಹೊರತುಪಡಿಸಿ, ಪೊಲೀಸ್ ಅಧಿಕಾರಿಗಳು ಅದರ ಕಾರಣಗಳನ್ನು ಸಮರ್ಥಿಸಲು ಸಮರ್ಥರಾಗಿರಬೇಕು. ಒಬ್ಬ ವ್ಯಕ್ತಿಯ ವಿರುದ್ಧ ಅಪರಾಧ ನಡೆಸಿದ್ದಾನೆಂದು ಆಪಾದಿಸಿದ ಮಾತ್ರಕ್ಕೆ ಅವನನ್ನು ಎಂದಿನಂತೆ ಬಂಧಿಸಲಾಗದು.ಆಪಾದನೆಯ ಪ್ರಾಮಾಣಿಕತೆಗೆ ಸಂಬಂಧಿಸಿದಂತೆ ಕೆಲವು ತನಿಖೆ ನಡೆಸಿದ ನಂತರ, ಸಕಾರಣವಾಗಿ ಮನವರಿಕೆ ಮಾಡಿಕೊಳ್ಳದ ಹೊರತು ಯಾವುದೇ ಬಂಧನವನ್ನು ಮಾಡಬಾರದೆಂಬುದು ಪೊಲೀಸ್ ಅಧಿಕಾರಿಯ ದೂರದೃಷ್ಟಿ ಮತ್ತು ವಿವೇಕವಾಗಿರುತ್ತದೆ.ಈ ಕಾನೂನುಸ್ಥಿತಿಯು ಹೀಗಿದ್ದರೂ ನ್ಯಾಯವಿಧಾಯಕ ಶಾಸಕಾಂಗ ಸಭೆಯು ಯಾವುದೇ ಸುಧಾರಣೆ ಹೊಂದಿಲ್ಲ.ಬಂಧಿತರ ಸಂಖ್ಯೆ ಕಡಿಮೆಯಾಗಿಲ್ಲ.ಅಂತಿಮವಾಗಿ, ಸಂಸತ್ತು ಮಧ್ಯಪ್ರವೇಶಿಸಬೇಕಾಯಿತು ಮತ್ತು ದಂಡಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತವಾಗಿ ಸಿ.ಆರ್.ಪಿ.ಸಿ.) ಪ್ರಕರಣ 41, 2001 ರ ವರ್ಷದಲ್ಲಿ ಸಲ್ಲಿಸಿದ ಕಾನೂನು ಆಯೋಗದ 177 ನೇ ವರದಿಯ ಶಿಫಾರಸ್ಸಿನ ಆಧಾರದ ಮೇಲೆ, ಈಗಿರುವ ನಮೂನೆಯಲ್ಲಿ ಅಧಿನಿಯಮಿಸಲಾಯಿತು.ಇಂಥ ಶಿಫಾರಸನ್ನು ಕಾನೂನು ಆಯೋಗವು ತನ್ನ 152 ನೇ ಮತ್ತು 154 ನೇ ವರದಿಯಲ್ಲಿ ಮಾಡಿದ್ದು, ಅದನ್ನು 1994 ರ ವರ್ಷದಲ್ಲಿ ಮರಳಿ ಸಲ್ಲಿಸಲಾಯಿತೆಂಬುದನ್ನು ಗಮನಿಸುವುದು ಆಸಕ್ತಿದಾಯಕವಾಗಿದೆ.ಅನುಪಾತದ ಮೌಲ್ಯವು ಬಂಧನಕ್ಕೆ ಸಂಬಂಧಿಸಿದ ತಿದ್ದುಪಡಿಯ ಒಳ ವ್ಯಾಪಿಸುತ್ತದೆ.

7. ಈಗಿನ ಅಪೀಲಿನಲ್ಲಿ ನಾವು ಗಮನಿಸಿದ ಅಪರಾಧವು, ಏಳು ವರ್ಷಗಳಿಗೆ ವಿಸ್ತರಿಸಬಹುದಾದ ಮತ್ತು ದಂಡ ವಿಧಿಸುವ ಕಾರಾಗೃಹವಾಸ ಶಿಕ್ಷೆಯನ್ನು ಉಪಬಂಧಿಸುವುದರಿಂದ, ಆ ಉದ್ದೇಶಕ್ಕೆ ಸಂಬಂಧಿಸುವ ಸಿ.ಆರ್.ಪಿ.ಸಿ.ಯ ಪ್ರಕರಣ 41 ( 1) (ಬಿ) ಯನ್ನು ಈ ಮುಂದಿನಂತೆ ಓದಲಾಗುತ್ತದೆ:

41. ಪೊಲೀಸರು ವಾರಂಟಿಲ್ಲದೆ ಬಂಧಿಸುವಾಗ.- ( 1) ಯಾರೇ ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟರಿಂದ ಆದೇಶವಿಲ್ಲದೆ ಮತ್ತು ವಾರಂಟಿಲ್ಲದೆ,

( ಎ) ***

(ಬಿ) ಯಾರ ವಿರುದ್ಧ ಸಮಂಜಸವಾದ ದೂರನ್ನು ನೀಡಲಾಗಿದೆಯೋ, ಅಥವಾ ನ ೦ ಬಲರ್ಹವಾದ ಮಾಹಿತಿಯನ್ನು ಪಡೆಯಲಾಗಿದೆಯೋ, ಅಥವಾ ಈ ಕೆಳಗಿನ ಷರತ್ತುಗಳು ಅನ್ವಯವಾದಲ್ಲಿ, ದಂಡದೊಂದಿಗೆ ಅಥವಾ ದಂಡವಿಲ್ಲದೆ ಏಳು ವರ್ಷಗಳಿಗಿಂತ ಕಡಿಮೆ ಅಥವಾ ಏಳು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ

ಕಾರಾಗೃಹ ವಾಸದೊಂದಿಗೆ ಶಿಕ್ಷಾರ್ಹವಾದ ಸಂಜ್ಞೇಯ ಅಪರಾಧವನ್ನು ಎಸಗಿದ್ದಾನೆಂದು ಯುಕ್ತ ಅನುಮಾನ ಉಂಟಾಗಿದೆಯೋ D ಅಂಥ ಯಾರೇ ವ್ಯಕ್ತಿಯನ್ನು ಬಂಧಿಸಬಹುದು, ಅಂದರೆ

(1) * * *

(ii) ಅಂಥ ಬಂಧನವು ಅಗತ್ಯವಿದೆಯೆಂದು ಪೊಲೀಸ್ ಅಧಿಕಾರಿಗೆ ಮನದಟ್ಟಾಗಿದ್ದಾಗ

(ಎ) ಇನ್ನೂ ಹೆಚ್ಚಿನ ಅಪರಾಧ ಎಸಗುವುದರಿಂದ ಅಂಥ ವ್ಯಕ್ತಿಯನ್ನು ತಡೆಯಲು; ಅಥವಾ

(ಬಿ) ಅಪರಾಧದ ಸೂಕ್ತ ತನಿಖೆಗಾಗಿ, ಅಥವಾ

(ಸಿ) ಅಪರಾಧದ ಸಾಕ್ಷ್ಯವು ಕಳೆದುಹೋಗಲು ಅಥವಾ ಹರಿದು ಅಕ್ರಮವಾಗಿ ತಿದ್ದಲು ಯಾವುದೇ ರೀತಿಯಲ್ಲಿ ಕಾರಣವಾಗುವುದರಿಂದ ಅಂಥ ವ್ಯಕ್ತಿಯನ್ನು ತಡೆಯಲು; ಅಥವಾ

(ಡಿ) ಪ್ರಕರಣದ ಸಂಗತಿಗಳನ್ನು ತಿಳಿದಿರುವ ಯಾರೇ ವ್ಯಕ್ತಿಗೆ ಅಂಥ ಸಂಗತಿಗಳನ್ನು ನ್ಯಾಯಾಲಯಕ್ಕೆ ಅಥವಾ ಪೊಲೀಸ್ ಅಧಿಕಾರಿಗೆ ಬಹಿರಂಗಪಡಿಸುವುದರಿಂದ ಅವನನ್ನು ವಿಮುಖಗೊಳಿಸುವ ಹಾಗೆ ಯಾವುದೇ ಪ್ರಚೋದನೆ, ಬೆದರಿಕೆ ಅಥವಾ ವಾಗ್ದಾನ ಮಾಡುವುದರಿಂದ ಅಂಥ ವ್ಯಕ್ತಿಯನ್ನು ತಡೆಯಲು; ಅಥವಾ

(ಇ) ಅಂಥ ವ್ಯಕ್ತಿಯನ್ನು ಬಂಧಿಸದ ಹೊರತು, ಅವನ ಉಪಸ್ಥಿತಿಯು ನ್ಯಾಯಾಲಯದಲ್ಲಿ ಯಾವಾಗ ಅಗತ್ಯವಿರುತ್ತದೆಯೋ ಅದನ್ನು ಖಚಿತಪಡಿಸಲಾಗುವುದಿಲ್ಲ ಮತ್ತು ಪೊಲೀಸ್ ಅಧಿಕಾರಿಯು ಹಾಗೆ ಬಂಧಿಸುವಾಗ, ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು:

ಪರಂತು, ಪೊಲೀಸ್ ಅಧಿಕಾರಿಯು, ಈ ಉಪ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಒಬ್ಬ ವ್ಯಕ್ತಿಯನ್ನು ಬಂಧನ ಅಗತ್ಯವಿರದ ಎಲ್ಲಾ ಸಂದರ್ಭಗಳಲ್ಲಿ, ಬಂಧಿಸದಿರುವುದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ".

7.1 ಮೇಲೆ ಹೇಳಿದ ಉಪಬಂಧದ ಸರಳ ಓದಿನಿಂದ, ದಂಡದೊಂದಿಗೆ ಅಥವಾ ದಂಡವಿಲ್ಲದೆ ಏಳು ವರ್ಷಗಳಿಗಿಂತ ಕಡಿಮೆ ಅಥವಾ ಏಳು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾಗೃಹವಾಸದ ಶಿಕ್ಷಾರ್ಹ ಅಪರಾಧದಿಂದ ಆಪಾದಿತನಾದ ವ್ಯಕ್ತಿಯನ್ನು, ಮೇಲೆ ಹೇಳಿದಂತೆ ಶಿಕ್ಷಾರ್ಹವಾದ ಅಪರಾಧವನ್ನು ಅಂಥ ವ್ಯಕ್ತಿಯು ಎಸಗಿರುವನೇ ಎಂಬುದನ್ನು ಮನದಟ್ಟು ಮಾಡಿಕೊಂಡ ಮಾತ್ರಕ್ಕೆ ಪೊಲೀಸ್ ಅಧಿಕಾರಿಯು ಅವನನ್ನು ಬಂಧಿಸಲಾಗದೆಂದು ಸ್ಪಷ್ಟವಾಗುತ್ತದೆ.ಪೊಲೀಸ್ ಅಧಿಕಾರಿಯು ಅಂಥ ಪ್ರಕರಣಗಳಲ್ಲಿ ವ್ಯಕ್ತಿಯನ್ನು ಬಂಧಿಸುವುದಕ್ಕೆ ಮುಂಚೆ ಅಂಥ ವ್ಯಕ್ತಿಯನ್ನು ಇನ್ನೂ ಹೆಚ್ಚಿನ ಅಪರಾಧ ಮಾಡುವುದರಿಂದ ತಡೆಯಲು; ಅಥವಾ ಪ್ರಕರಣದ ಸೂಕ್ತ ತನಿಖೆಗಾಗಿ; ಅಥವಾ ಅಪರಾಧದ ಸಾಕ್ಷ್ಯವು ಕಳೆದುಹೋಗಲು ಅಥವಾ ಅಂಥ ಸಾಕ್ಷ್ಯವು ಯಾವುದೇ ರೀತಿಯಲ್ಲಿ ಅಕ್ರಮವಾಗಿ ತಿದ್ದಲು ಕಾರಣವಾಗುವುದರಿಂದ ಆಪಾದಿತನನ್ನು ತಡೆಯಲು; ಅಥವಾ ತನಗೆ ತಿಳಿದಿರುವ ಅಂಥ ಸಂಗತಿಗಳನ್ನು ನ್ಯಾಯಾಲಯಕ್ಕೆ ಅಥವಾ ಪೊಲೀಸ್ ಅಧಿಕಾರಿಗೆ ಬಹಿರಂಗಪಡಿಸುವುದರಿಂದ ಅವನನ್ನು ವಿಮುಖಗೊಳಿಸುವ ಹಾಗೆ ಸಾಕ್ಷಿದಾರನಿಗೆ ಯಾವುದೇ ಪ್ರಚೋದನೆ, ಬೆದರಿಕೆ ಅಥವಾ ವಾಗ್ದಾನ ಮಾಡುವುದರಿಂದ ಅಂಥ ವ್ಯಕ್ತಿಯನ್ನು ತಡೆಯಲು ಅಂಥ ಬಂಧನದ ಅಗತ್ಯವಿದೆಯೆಂದು ಅಥವಾ ಅಂಥ ಆಪಾದಿತ ವ್ಯಕ್ತಿಯನ್ನು ಬಂಧಿಸಿದ ಹೊರತು, ಅವನ ಉಪಸ್ಥಿತಿಯು

ನ್ಯಾಯಾಲಯದಲ್ಲಿ ಯಾವಾಗ ಅಗತ್ಯವಿರುತ್ತದೆಂದು ಖಚಿತಪಡಿಸಲಾಗದೆಂದು ಇನ್ನಷ್ಟು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ.ಸಂಗತಿಗಳ ಆಧಾರದ ಮೇಲೆ ನಾವು ಈ ನಿರ್ಣಯಗಳನ್ನು ಮಾಡಬಹುದಾಗಿದೆ.

7.2 ಕಾನೂನು, ಪೊಲೀಸ್ ಅಧಿಕಾರಿಯನ್ನು, ಸಂಗತಿಗಳನ್ನು ಹೇಳಲು ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಲು ಕಡ್ಡಾಯಗೊಳಿಸುತ್ತದೆ.ಅದು ಅಂಥ ಬಂಧನವನ್ನು ಮಾಡುವಾಗ, ಹಿಂದೆ ಹೇಳಿದ ಯಾವುದೇ ಉಪಬಂಧಗಳಿಂದ ಕೂಡಿದ ನಿರ್ಣಯಕ್ಕೆ ಬರಲು ಕಾರಣವಾಗುತ್ತದೆ.ಅಲ್ಲದೆ, ಕಾನೂನು ಪೊಲೀಸ್ ಅಧಿಕಾರಿಗಳನ್ನು ಅವರು ಬಂಧನ ಮಾಡದಿರುವುದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಲು ಅಗತ್ಯಪಡಿಸುತ್ತದೆ.

7.3 ವಿಷಯದ ಮುಖ್ಯಾಂಶವೆಂದರೆ, ಪೊಲೀಸ್ ಅಧಿಕಾರಿಯು ಬಂಧಿಸುವುದಕ್ಕೆ ಮುಂಚೆ ಏಕೆ ಬಂಧಿಸಬೇಕು?ಎಂದು ತನಗೆ ತಾನೇ ಪ್ರಶ್ನಿಸಿಕೊಳ್ಳಬೇಕು.ಇದು ನಿಜವಾಗಿಯೂ ಅಗತ್ಯವಿದೆಯೇ?ಇದು ಯಾವ ಉದ್ದೇಶವನ್ನು ನೆರವೇರಿಸುತ್ತದೆ?ಇದು ಯಾವ ಗುರಿಯನ್ನು ಸಾಧಿಸುತ್ತದೆ?ಈ ಪ್ರಶ್ನೆಗಳನ್ನು ಕೇಳಿಕೊಂಡ ಮತ್ತು ಮೇಲೆ ಪರಿಗಣಿಸಿದಂತೆ ಒಂದು ಅಥವಾ ಇತರ ಷರತ್ತುಗಳು ಮನವರಿಕೆಯಾದ ನಂತರ ಮಾತ್ರವೇ ಬಂಧಿಸುವ ಅಧಿಕಾರವನ್ನು ಚಲಾಯಿಸಬೇಕಿರುತ್ತದೆ.ವಾಸ್ತವವಾಗಿ, ಬಂಧಿಸುವುದಕ್ಕೆ ಮುಂಚೆ, ಪೊಲೀಸ್ ಅಧಿಕಾರಿಯು, ಆಪಾದಿತನು ಅಪರಾಧವನ್ನು ಎಸಗಿದ್ದಾನೆಂದು, ಮಾಹಿತಿಯ ಹಾಗೂ ಮುಖ್ಯ ವಿಷಯಸಾಮಗ್ರಿಗಳ ಆಧಾರದ ಮೇಲೆ ನಂಬಲು ಕಾರಣವನ್ನು ಹೊಂದಿರತಕ್ಕದ್ದು.ಇದನ್ನು ಹೊರತುಪಡಿಸಿ, ಪೊಲೀಸ್ ಅಧಿಕಾರಿಯು, ಸಿ.ಆರ್.ಪಿ.ಸಿ. ಸೆಕ್ಷನ್ 41 ರ ಖಂಡ ( 1) ರ ಉಪಖಂಡ ( ಎ) ಯಿಂದ ( ಇ) ವರೆಗೆ ಯೋಜಿಸಲಾದ ಒಂದು ಅಥವಾ ಹೆಚ್ಚಿನ ಉದ್ದೇಶಗಳಿಗೆ ಬಂಧನದ ಅಗತ್ಯವಿದೆಯೆಂದು ಮತ್ತಷ್ಟು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ.

8. ಪೊಲೀಸರು ವಾರಂಟಿಲ್ಲದೆ ಬಂಧಿಸಲಾದ ಆಪಾದಿತನನ್ನು, ಯಾವುದೇ ಅನಗತ್ಯ ಕಾಲವಿಳಂಬವಿಲ್ಲದೆ ಮತ್ತು ಪ್ರಯಾಣಕ್ಕೆ ಅಗತ್ಯವಿರುವ ಸಮಯವನ್ನು ಹೊರತುಪಡಿಸಿ, ಯಾವುದೇ ಸಂದರ್ಭದಲ್ಲಿಯೂ 24 ಗಂಟೆಗಳು ಮೀರದಂತೆ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸುವುದು ಭಾರತ ಸಂವಿಧಾನದ ಅನುಚ್ಛೇದ 22 ( 2) ರ ಅಡಿಯಲ್ಲಿ ಹಾಗೂ ಸಿ.ಆರ್.ಪಿ.ಸಿ. ಸೆಕ್ಷನ್ 57 ರ ಅಡಿಯಲ್ಲಿ ಸಾಂವಿಧಾನಿಕ ಹಕ್ಕಾಗಿರುತ್ತದೆ:

8.1 ಸಿ.ಆರ್.ಪಿ.ಸಿ. ಸೆಕ್ಷನ್ 167 ರ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಮ್ಯಾಜಿಸ್ಟ್ರೇಟರಿಂದ ಅದು ಅಧಿಕೃತಗೊಂಡಾಗ ಮಾತ್ರ ಪ್ರಕರಣದ ತನಿಖೆಯ ಅವಧಿಯಲ್ಲಿ ಆಪಾದಿತನನ್ನು 24 ಗಂಟೆಗಳ ಅವಧಿಯನ್ನು ಮೀರಿ ಬಂಧನದಲ್ಲಿಡಬಹುದು.ಬಂಧನವನ್ನು ಅಧಿಕೃತಗೊಳಿಸುವ ಅಧಿಕಾರವು ಬಹಳ ವಿವೇಕಪೂರ್ಣವೂ ಹಾಗೂ ನ್ಯಾಯಯುಕ್ತವೂ ಆದ ಕಾರ್ಯವಾಗಿದೆ.ಇದು ನಾಗರಿಕರ ಸ್ವಾತಂತ್ರ್ಯ ಮತ್ತು ಬಿಡುಗಡೆಯನ್ನು ಬಾಧಿಸುತ್ತದೆಯಾದ್ದರಿಂದ, ಇದನ್ನು ಅತ್ಯಂತ ಹೆಚ್ಚಿನ ಜಾಗರೂಕತೆ ಹಾಗೂ ಎಚ್ಚರಿಕೆಯಿಂದ ಚಲಾಯಿಸಬೇಕಾಗಿರುತ್ತದೆ.ಅದಕ್ಕೆ ತಕ್ಕುದಾದ ಗಂಭೀರತೆಯಿಂದ ಅದನ್ನು ಚಲಾಯಿಸಿಲ್ಲವೆಂದು ನಮ್ಮ ಅನುಭವದಿಂದ ತಿಳಿಯುತ್ತದೆ.ಅನೇಕ ಪ್ರಕರಣಗಳಲ್ಲಿ ಬಂಧನವನ್ನು ದಿನನಿತ್ಯದ, ಸಾಂದರ್ಭಿಕ ಹಾಗೂ ನಿರ್ಲಕ್ಷ್ಯದ ರೀತಿಯಲ್ಲಿ ಅಧಿಕೃತಗೊಳಿಸಲಾಗಿದೆ.

8.2 ಮ್ಯಾಜಿಸ್ಟ್ರೇಟರು ಸಿ.ಆರ್.ಪಿ.ಸಿ. ಸೆಕ್ಷನ್ 167 ರ ಅಡಿಯಲ್ಲಿ ಬಂಧನವನ್ನು ಅಧಿಕೃತಗೊಳಿಸುವುದಕ್ಕೆ ಮುಂಚೆ, ಅವರು ಮೊದಲು, ಮಾಡಲಾದ ಬಂಧನವು ಕಾನೂನುಬದ್ಧವಾಗಿದೆ ಮತ್ತು ಕಾನೂನಿನ

ಅನುಸಾರವಾಗಿದೆ ಮತ್ತು ಬಂಧಿಸಲಾದ ವ್ಯಕ್ತಿಯ ಎಲ್ಲಾ ಸಾಂವಿಧಾನಿಕ ಹಕ್ಕುಗಳು ಮನದಟ್ಟಾಗಿವೆಯೆಂದು ಅರಿಯಬೇಕು.ಪೊಲೀಸ್ ಅಧಿಕಾರಿಯು ಜಾರಿಗೊಳಿಸಿದ ಬಂಧನವು, ಸಂಹಿತೆಯ ಪ್ರಕರಣ 41 ರ ಅಗತ್ಯತೆಗಳನ್ನು ಪೂರೈಸದಿದ್ದಲ್ಲಿ, ಮ್ಯಾಜಿಸ್ಟ್ರೇಟರು ಅವನ ಹೆಚ್ಚಿನ ಬಂಧನವನ್ನು ಅಧಿಕೃತಗೊಳಿಸದಿರಲು ಮತ್ತು ಆಪಾದಿತನನ್ನು ಬಿಡುಗಡೆ ಮಾಡಲು ಕರ್ತವ್ಯಬದ್ಧರಾಗಿರುತ್ತಾರೆ.ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಪಾದಿತನನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರಪಡಿಸಿದಾಗ, ಬಂಧಿಸುವ ಪೊಲೀಸ್ ಅಧಿಕಾರಿಯು ಬಂಧನದ ಸಂಗತಿಗಳು, ಕಾರಣಗಳು ಮತ್ತು ಅದರ ನಿರ್ಣಯಗಳನ್ನು ಮ್ಯಾಜಿಸ್ಟ್ರೇಟರಿಗೆ ಒದಗಿಸುವ ಅಗತ್ಯತೆಯಿದೆ ಮತ್ತು ಅದಕ್ಕೆ ಪ್ರತಿಯಾಗಿ ಮ್ಯಾಜಿಸ್ಟ್ರೇಟರು ಸಿ.ಆರ್.ಪಿ.ಸಿ. ಸೆಕ್ಷನ್ 41 ರ ಅಡಿಯಲ್ಲಿ ಬಂಧನಕ್ಕೆ ಮೊದಲಿನ ಸ್ಥಿತಿಗತಿಯನ್ನು ಅರಿತುಕೊಳ್ಳಲಾಗಿದೆಯೆಂದು ಮನದಟ್ಟು ಮಾಡಿಕೊಳ್ಳಬೇಕಿರುತ್ತದೆ ಮತ್ತು ಆ ನಂತರ ಮಾತ್ರವೇ ಅವರು ಆಪಾದಿತನ ಬಂಧನವನ್ನು ಅಧಿಕೃತಗೊಳಿಸುತ್ತಾರೆ.

8.3 ಮ್ಯಾಜಿಸ್ಟ್ರೇಟರು ಬಂಧನವನ್ನು ಅಧಿಕೃತಗೊಳಿಸುವುದಕ್ಕೆ ಮುಂಚೆ ತಾನು ಮನದಟ್ಟು ಮಾಡಿಕೊಂಡಿದ್ದನ್ನು ಸಂಕ್ಷಿಪ್ತವಾಗಿ ದಾಖಲಿಸುತ್ತಾರೆ.ಆದರೆ, ಸದರಿ ಮನದಟ್ಟಾಗುವಿಕೆಯು ಅವರ ಆದೇಶದಿಂದ ಪ್ರತಿಬಿಂಬಿತವಾಗಬೇಕು.ಅದು ಎ ೦ ದಿಗೂ ಪೊಲೀಸ್ ಅಧಿಕಾರಿಯ ಸ್ವಾಧಿ ಕಾರೋಕ್ತಿಯ ಮೇಲೆ ಆಧಾರಿತವಾಗತಕ್ಕದ್ದಲ್ಲ.ಉದಾ:ಒಂದು ವೇಳೆ, ಪೊಲೀಸ್ ಅಧಿಕಾರಿಯು ಅಂಥ ವ್ಯಕ್ತಿಯನ್ನು ಯಾವುದೇ ಹೆಚ್ಚಿನ ಅಪರಾಧ ಎಸಗುವುದರಿಂದ ತಡೆಯಲು ಅಥವಾ ಪ್ರಕರಣದ ಸೂಕ್ತ ತನಿಖೆಗಾಗಿ ಅಥವಾ ಆಪಾದಿತನನ್ನು, ಸಾಕ್ಷ್ಯವನ್ನು ಅಕ್ರಮವಾಗಿ ತಿದ್ದುವುದರಿಂದ ಅಥವಾ ಪ್ರಚೋದಿಸುವುದು ಮುಂತಾದ್ದರಿಂದ ತಡೆಯಲು ಬಂಧನವು ಅಗತ್ಯವೆಂದು ಪರಿಗಣಿಸಿದಲ್ಲಿ, ಪೊಲೀಸ್ ಅಧಿಕಾರಿಯು, ಯಾವುದರ ಆಧಾರದ ಮೇಲೆ ಆ ನಿರ್ಣಯಕ್ಕೆ ಬಂದರೋ ಆ ಸಂಗತಿಗಳು, ಕಾರಣಗಳು ಮತ್ತು ವಿಷಯ ಸಾಮಗ್ರಿಗಳನ್ನು ಮ್ಯಾಜಿಸ್ಟ್ರೇಟರಿಗೆ ಒದಗಿಸತಕ್ಕದ್ದು.ಮ್ಯಾಜಿಸ್ಟ್ರೇಟರು, ಬಂಧನವನ್ನು ಅಧಿಕೃತಗೊಳಿಸುವಾಗ ಅವುಗಳನ್ನು ಅವಗಾಹಿಸತಕ್ಕದ್ದು ಮತ್ತು ತಮ್ಮ ಸಮ್ಮತಿಯನ್ನು ಲಿಖಿತದಲ್ಲಿ ದಾಖಲಿಸಿದ ನಂತರ ಮಾತ್ರ ಮ್ಯಾಜಿಸ್ಟ್ರೇ ಟರು ಆಪಾದಿತನ ಬಂಧನವನ್ನು ಅಧಿಕೃತಗೊಳಿಸುವುದು.

8.4 ವಾಸ್ತವವಾಗಿ, ಸಂದೇಹಾಸ್ಪದ ವ್ಯಕ್ತಿಯನ್ನು ಬಂಧಿಸಿದಾಗ ಮತ್ತು ಬಂಧನವನ್ನು ಅಧಿಕೃತಗೊಳಿಸಲು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿದಾಗ, ಮ್ಯಾಜಿಸ್ಟ್ರೇಟರು ಬಂಧನಕ್ಕೆ ನಿರ್ದಿಷ್ಟ ಕಾರಣಗಳಿವೆಯೇ ಮತ್ತು ಹಾಗಿದ್ದಲ್ಲಿ, ಮೇಲ್ನೋಟಕ್ಕೆ ಆ ಕಾರಣಗಳು ಸುಸಂಬದ್ಧವಾಗಿವೆಯೇ ಎಂಬ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕು, ಮತ್ತು ಎರಡನೆಯದಾಗಿ, ಮೇಲೆ ತಿಳಿಸಲಾದ ಒಂದು ಅಥವಾ ಇತರ ಷರತ್ತುಗಳು ಅನ್ವಯವಾಗಿವೆಯೆಂದು ಪೊಲೀಸ್ ಅಧಿಕಾರಿಯು ಸಮಂಜಸವಾದ ನಿರ್ಣಯವನ್ನು ಕೈಗೊಳ್ಳಲೇಬೇಕು.ಈ ಸೀಮಿತ ವ್ಯಾಪ್ತಿಯಲ್ಲಿ ಮ್ಯಾಜಿಸ್ಟ್ರೇಟರು ನ್ಯಾಯಿಕ ಪರಿಶೀಲನೆಯನ್ನು ಮಾಡುವುದು.

9. ಮತ್ತೊಂದು ಉಪಬಂಧ, ಅಂದರೆ ಸಿ.ಆರ್.ಪಿ.ಸಿ. ಸೆಕ್ಷನ್ 41- ಎ ಯು, ಆಪಾದಿತನ ಮೇಲೆ, ದೊಡ್ಡದಾಗಿ ಅಸ್ಪಷ್ಟವಾಗಿ ಕಾಣಿಸುವ, ಅನಗತ್ಯ ಬಂಧನ ಅಥವಾ ಬಂಧನದ ಭೀತಿಯನ್ನು ತಡೆಯಲು ಉದ್ದೇಶಿಸಿದ್ದು, ಅದನ್ನು ಸಚೇತನಗೊಳಿಸುವ ಅಗತ್ಯವಿದೆ.ದಂಡಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ಅಧಿನಿಯಮ, 2008 ರ ಪ್ರಕರಣ 6 ರಿಂದ ಸೇರ್ಪಡೆಯಾದಂತೆ ಪ್ರಕರಣ 41- ಎ, ಈ ಸಂದರ್ಭದಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಿದ್ದು, ಅದನ್ನು ಈ ಮುಂದಿನಂತೆ ಓದಲಾಗುತ್ತದೆ:

66 41- ಎ. ಪೊಲೀಸ್ ಅಧಿಕಾರಿಯ ಮುಂದೆ ಹಾಜರಾಗುವುದಕ್ಕೆ ನೋಟೀಸು.- ( 1) ಪೊಲೀಸ್ ಅಧಿಕಾರಿಯು ಪ್ರಕರಣ 41 ರ ಉಪಪ್ರಕರಣ ( 1) ರ ಉಪಬಂಧಗಳ ಅಡಿಯಲ್ಲಿ ಒಬ್ಬ ವ್ಯಕ್ತಿಯ ಬಂಧನವು ಅಗತ್ಯವಿರದಂಥ ಎಲ್ಲಾ ಪ್ರಕರಣಗಳಲ್ಲಿ ಅವನು ಸಂಜ್ಞೇಯವಾದ ಅಪರಾಧವನ್ನು ಮಾಡಿದ್ದಾನೆಂದು, ಯಾರ ವಿರುದ್ಧ ಸಮಂಜಸವಾದ ದೂರು ನೀಡಲಾಗಿತ್ತೋ ಅಥವಾ ವಿಶ್ವಾಸಾರ್ಹ ಮಾಹಿತಿಯನ್ನು ಪಡೆಯಲಾಗಿತ್ತೋ, ಅಥವಾ ಯುಕ್ತ ಸಂದೇಹ ಉಂಟಾಗಿತ್ತೋ, ಆ ವ್ಯಕ್ತಿಗೆ ತನ್ನ ಮುಂದೆ ಹಾಜರಾಗಲು ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿ ಹಾಜರಾಗಲು ನಿರ್ದೇಶಿಸಿ ನೋಟೀಸನ್ನು ನೀಡತಕ್ಕದ್ದು.

(2) ಅಂಥ ನೋಟೀಸನ್ನು ಯಾರೇ ವ್ಯಕ್ತಿಗೆ ನೀಡಿದಲ್ಲಿ, ನೋಟೀಸಿನ ನಿಬಂಧನೆಗಳನ್ನು ಪಾಲಿಸುವುದು ಆ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು.

(3) ಅಂಥ ವ್ಯಕ್ತಿಯು ನೋಟೀಸನ್ನು ಪಾಲಿಸಿದಲ್ಲಿ ಮತ್ತು ಪಾಲಿಸುವುದನ್ನು ಮುಂದುವರಿಸಿದಲ್ಲಿ, ದಾಖಲಿಸಬೇಕಾದ ಕಾರಣಗಳಿಗಾಗಿ ಪೊಲೀಸ್ ಅಧಿ ಕಾರಿಯು ಅವನನ್ನು ಬಂಧಿಸಲೇಬೇಕೆಂದು ಅಭಿಪ್ರಾಯಪಟ್ಟ ಹೊರತು ನೋಟೀಸಿನಲ್ಲಿ ಉಲ್ಲೇಖಿಸಿದ ಅಪರಾಧದ ಸ ಂ ಬ ಂ ಧದಲ್ಲಿ ಅವನನ್ನು ಬಂಧಿಸತಕ್ಕದ್ದಲ್ಲ.

(4) ಅಂಥ ವ್ಯಕ್ತಿಯು ಯಾವುದೇ ಸಮಯದಲ್ಲಿ, ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ವಿಫಲನಾದಲ್ಲಿ ಅಥವಾ ತನ್ನನ್ನು ಗುರುತಿಸಿಕೊಳ್ಳಲು ಇಚ್ಛಿಸದಿದ್ದಲ್ಲಿ, ಪೊಲೀಸ್ ಅಧಿಕಾರಿಯು, ಈ ಸಂಬಂಧ ಸಕ್ಷಮ ನ್ಯಾಯಾಲಯವು ಹೊರಡಿಸಬಹುದಾದಂಥ ಆದೇಶಗಳಿಗೊಳಪಟ್ಟು, ನೋಟೀಸಿನಲ್ಲಿ ನಮೂದಿಸಿದ ಅಪರಾಧಕ್ಕಾಗಿ ಅವನನ್ನು ಬಂಧಿಸಬಹುದು."

ಒಬ್ಬ ವ್ಯಕ್ತಿಯ ಬಂಧನವು ಸಿ.ಆರ್.ಪಿ.ಸಿ. ಸೆಕ್ಷನ್ 41 ( 1) ರ ಅಡಿಯಲ್ಲಿ ಅಗತ್ಯವಿರದ ಎಲ್ಲಾ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಯು, ಆಪಾದಿತನಿಗೆ ನಿರ್ದಿಷ್ಟ ಸ್ಥಳ ಮತ್ತು ಸಮಯದಲ್ಲಿ ತನ್ನ ಮುಂದೆ ಹಾಜರಾಗಲು ನಿರ್ದೇಶಿಸಿ, ನೋಟೀಸನ್ನು ನೀಡುವ ಅಗತ್ಯವಿದೆಯೆಂದು, ಹಿಂದೆ ಹೇಳಿದ ಉಪಬಂಧವು ಸ್ಪಷ್ಟಪಡಿಸುತ್ತದೆ.

ಅಂಥ ಆಪಾದಿತನು ಪೊಲೀಸ್ ಅಧಿಕಾರಿಯ ಮುಂದೆ ಹಾಜರಾಗಬೇಕೆಂದು ಕಾನೂನು ನಿರ್ಬಂಧಿಸುತ್ತದೆ ಮತ್ತು ಅಷ್ಟೇ ಅಲ್ಲದೆ, ಅಂಥ ಆಪಾದಿತನು ನೋಟೀಸಿನ ನಿಬಂಧನೆಗಳನ್ನು ಪಾಲಿಸಿದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಪೊಲೀಸ್ ಅಧಿಕಾರಿಯು ಬಂಧನವು ಅಗತ್ಯವಿದೆಯೆಂದು ಅಭಿಪ್ರಾಯಪಟ್ಟ ಹೊರತು, ಅವನನ್ನು ಬಂಧಿಸತಕ್ಕದ್ದಲ್ಲ.ಈ ಹಂತದಲ್ಲೂ ಸಹ, ಸಿ.ಆರ್.ಪಿ.ಸಿ. ಸೆಕ್ಷನ್ 41 ರ ಅಡಿಯಲ್ಲಿ ಯೋಜಿಸಲಾದಂತೆ, ಬಂಧನದ ಪೂರ್ವಷರತ್ತನ್ನು ಪಾಲಿಸಬೇಕು ಮತ್ತು ಹಿಂದೆ ಹೇಳಿದಂತೆ, ಮ್ಯಾಜಿಸ್ಟ್ರೇಟರು ಅದೇ ಪರಿಶೀಲನೆಗೆ ಅದನ್ನು ಒಳಪಡಿಸತಕ್ಕದ್ದು.

10. ಮ್ಯಾಜಿಸ್ಟ್ರೇಟರ ಯಾವುದೇ ಆದೇಶವಿಲ್ಲದೆ ಮತ್ತು ವಾರಂಟಿಲ್ಲದೆ ಆಪಾದಿತನನ್ನು ಬಂಧಿಸಲು ಪೊಲೀಸ್ ಅಧಿಕಾರಿಯನ್ನು ಅಧಿಕೃತಗೊಳಿಸುವ ಸಿ.ಆರ್.ಪಿ.ಸಿ. ಸೆಕ್ಷನ್ 41 ರ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದಲ್ಲಿ, ಪೊಲೀಸ್ ಅಧಿಕಾರಿಗಳಿಂದ ಗೊತ್ತಿದ್ದೋ ಗೊತ್ತಿಲ್ಲದೆಯೋ ತಪ್ಪು ನಡೆದಾಗ ಅದನ್ನು ವಿಪರ್ಯಯಗೊಳಿಸಲಾಗುವುದು ಮತ್ತು ನಿರೀಕ್ಷಣಾ ಜಾಮೀನಿನ ಅನುದಾನಕ್ಕಾಗಿ ನ್ಯಾಯಾಲಯಕ್ಕೆ ಬರುವ ಪ್ರಕರಣಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುತ್ತದೆಂದು ನಾವು ಅಭಿಪ್ರಾಯಪಡುತ್ತೇವೆ.ಬಂಧನವನ್ನು ಪರಿಣಾಮಕಾರಿಯಾಗಿಸಲು ಸಿ.ಆರ್.ಪಿ.ಸಿ. ಸೆಕ್ಷನ್ 41 ರಲ್ಲಿ

ಒಳಗೊಂಡಿರುವ ಎಲ್ಲಾ ಅಥವಾ ಬಹುತೇಕ ಕಾರಣಗಳನ್ನು ಪ್ರಕರಣದ ದಿನಚರಿಯಲ್ಲಿ ಯಾಂತ್ರಿಕವಾಗಿ ಪುನರಾವರ್ತಿಸುವ ಪರಿಪಾಠವನ್ನು ಪ್ರೋತ್ಸಾಹಿಸಬಾರದೆಂದು ಮತ್ತು ಮುಂದುವರೆಸಬಾರದೆಂದು ಒತ್ತಿ ಹೇಳಲು ನಾವು ಇಚ್ಛಿಸುತ್ತೇವೆ.

11. ಈ ತೀರ್ಪಿನಲ್ಲಿ ನಮ್ಮ ಪ್ರಯತ್ನವು, ಪೊಲೀಸ್ ಅಧಿಕಾರಿಗಳು ಆಪಾದಿತರನ್ನು ಅನಗತ್ಯವಾಗಿ ಬಂಧಿಸುವುದಿಲ್ಲ ಮತ್ತು ಮ್ಯಾಜಿಸ್ಟ್ರೇಟರು ಬಂಧನವನ್ನು ಆಕಸ್ಮಿಕವಾಗಿ ಹಾಗೂ ಯಾಂತ್ರಿಕವಾಗಿ ಅಧಿಕೃತಗೊಳಿಸುವುದಿಲ್ಲವೆಂದು ಖಚಿತಪಡಿಸುವುದಾಗಿದೆ.ನಾವು ಈ ಮೇಲೆ ಗಮನಿಸಿದ್ದನ್ನು ಖಚಿತಪಡಿಸುವ ಸಲುವಾಗಿ, ಈ ಮುಂದಿನ ನಿರ್ದೇಶನಗಳನ್ನು ನೀಡುತ್ತೇವೆ:

11.1 ಎಲ್ಲಾ ರಾಜ್ಯ ಸರ್ಕಾರಗಳು ತಮ್ಮ ಪೊಲೀಸ್ ಅಧಿಕಾರಿಗಳಿಗೆ, ಐ.ಪಿ.ಸಿ. ಸೆಕ್ಷನ್ 498- ಎ ಅಡಿಯಲ್ಲಿ ಮೊಕದ್ದಮೆ ದಾಖಲಾದಾಗ, ತಾವಾಗಿಯೇ ಬಂಧಿಸಬಾರದೆಂದು, ಆದರೆ ಸಿ.ಆರ್.ಪಿ.ಸಿ. ಸೆಕ್ಷನ್ 41 ರ ಅನುಸಾರ, ಮೇಲೆ ವಿಧಿಸಲಾದ ಮಾನದಂಡಗಳ ಅಡಿಯಲ್ಲಿ ಬಂಧನದ ಅಗತ್ಯತೆಯ ಬಗ್ಗೆ ತಾವು ಮನದಟ್ಟು ಮಾಡಿಕೊಳ್ಳಲು ಸೂಚಿಸಬೇಕು;

11.2 ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಪ್ರಕರಣ 41 ( 1) (ಬಿ) (ii) ರ ಅಡಿಯಲ್ಲಿನ ನಿರ್ದಿಷ್ಟ ಉಪಬಂಧಗಳನ್ನು ಒಳಗೊಂಡಿರುವ ಚೆಕ್ಲಿಸ್ಟ್ನ್ನು ಒದಗಿಸಿರಬೇಕು;

11.3 ಹೆಚ್ಚಿನ ಬಂಧನಕ್ಕಾಗಿ ಮ್ಯಾಜಿಸ್ಟ್ರೇಟರ ಮುಂದೆ ಆಪಾದಿತನನ್ನು ಕಳುಹಿಸುವಾಗ/ಹಾಜರುಪಡಿಸುವಾಗ, ಪೊಲೀಸ್ ಅಧಿಕಾರಿಯು ಚೆಕ್ಲಿಸ್ಟ್ನ್ನು ಯುಕ್ತವಾಗಿ ಭರ್ತಿಮಾಡಿ ಹಾಗೂ ಬಂಧನವು ಅಗತ್ಯಪಡಿಸುವ ಕಾರಣಗಳು ಹಾಗೂ ವಿಷಯಗಳನ್ನು ಒದಗಿಸತಕ್ಕದ್ದು;

11.4 ಮ್ಯಾಜಿಸ್ಟ್ರೇಟರು ಆಪಾದಿತನ ಬಂಧನವನ್ನು ಅಧಿಕೃತಗೊಳಿಸುವಾಗ, ಮೇಲೆ ಹೇಳಿದ ರೀತಿಯಲ್ಲಿ, ಪೊಲೀಸ್ ಅಧಿಕಾರಿಯು ಒದಗಿಸಿದ ವರದಿಯನ್ನು ಅವಗಾಹಿಸತಕ್ಕದ್ದು ಮತ್ತು ವರದಿಯು ತೃಪ್ತಿಕರವಾಗಿರುವುದನ್ನು ದಾಖಲಿಸಿದ ನಂತರ ಮಾತ್ರ, ಮ್ಯಾಜಿಸ್ಟ್ರೇಟರು ಬಂಧನವನ್ನು ಅಧಿಕೃತಗೊಳಿಸುವುದು;

11.5 ಆಪಾದಿತನನ್ನು ಬಂಧಿಸಕೂಡದೆಂಬ ನಿರ್ಣಯವನ್ನು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟರು ಮ್ಯಾಜಿಸ್ಟ್ರೇಟರಿಗೆ ನೀಡಬಹುದಾದ ಪ್ರತಿಯೊಂದಿಗೆ, ದಾವೆ ಹೂಡಿದ ದಿನಾಂಕದಿಂದ ಎರಡು ವಾರಗಳೊಳಗಾಗಿ ಮ್ಯಾಜಿಸ್ಟ್ರೇಟರಿಗೆ ಕಳುಹಿಸಬೇಕು;

11.6 ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟರು ನೀಡಬಹುದಾದ, ಸಿ.ಆರ್.ಪಿ.ಸಿ. ಸೆಕ್ಷನ್ 41-ಎಗೆ ಸಂಬಂಧಿಸಿದ, ಹಾಜರಾಗುವ ಬಗೆಗಿನ ನೋಟೀಸನ್ನು ದಾವೆ ಹೂಡಿದ ದಿನಾಂಕದಿಂದ ಎರಡು ವಾರಗಳೊಳಗಾಗಿ ಆಪಾದಿತನಿಗೆ ನೀಡಬೇಕು;

11.7.ಹಿಂದೆ ಹೇಳಿದ ನಿರ್ದೇಶನಗಳನ್ನು ಪಾಲಿಸಲು ವಿಫಲರಾದರೆ, ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳನ್ನು ಇಲಾಖಾ ವಿಚಾರಣೆಗೆ ಒಳಪಡಿಸುವುದಷ್ಟೇ ಅಲ್ಲದೆ, ಅವರನ್ನು ಕೇಂದ್ರಾಡಳಿತ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಉಚ್ಚ ನ್ಯಾಯಾಲಯದ ಮುಂದೆ ನ್ಯಾಯಾಲಯ ನಿಂದನೆಗಾಗಿ ಸಹ ಶಿಕ್ಷೆಗೆ ಚ ಒಳಪಡಿಸತಕ್ಕದ್ದು;

11.8.ಸಂಬಂಧಪಟ್ಟ ನ್ಯಾಯಿಕ ಮ್ಯಾಜಿಸ್ಟ್ರೇಟರು ಹಿಂದೆ ಹೇಳಲಾದಂತೆ ಕಾರಣಗಳನ್ನು ದಾಖಲಿಸದೆ ಬಂಧನವನ್ನು ಅಧಿಕೃತಗೊಳಿಸಿದರೆ, ಸಮುಚಿತ ಉಚ್ಚನ್ಯಾಯಾಲಯವು ಅವರನ್ನು ಇಲಾಖಾ ಕ್ರಮಕ್ಕೆ ಒಳಪಡಿಸತಕ್ಕದ್ದು.

12. ಹಿಂದೆ ಹೇಳಿದ ನಿರ್ದೇಶನಗಳು ಐ.ಪಿ.ಸಿ. ಸೆಕ್ಷನ್ 498- ಎ ಅಥವಾ ವರದಕ್ಷಿಣೆ ನಿಷೇಧ ಕಾಯ್ದೆಯ ಪ್ರಕರಣ 4 ರ ಅಡಿಯಲ್ಲಿನ ಪ್ರಕರಣಗಳಿಗೆ ಮಾತ್ರವಲ್ಲದೆ ಅಪರಾಧವು ದಂಡದೊಂದಿಗೆ ಅಥವಾ ದಂಡವಿಲ್ಲದೆ ಏಳು ವರ್ಷಗಳಿಗಿಂತ ಕಡಿಮೆಯಿರಬಹುದಾದ ಅಥವಾ ಏಳು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾಗೃಹವಾಸದೊಂದಿಗೆ ಶಿಕ್ಷಾರ್ಹವಾಗಿರುವಂಥ ಪ್ರಕರಣಗಳಿಗೂ ಸಹ ಅನ್ವಯಿಸತಕ್ಕದ್ದು.

13. ಈ ತೀರ್ಪಿನ ಒಂದು ಪ್ರತಿಯನ್ನು ಮುಖ್ಯ ಕಾರ್ಯದರ್ಶಿಗಳಿಗೆ, ಹಾಗೆಯೇ ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಮಹಾ ನಿರ್ದೇಶಕರುಗಳಿಗೆ ಹಾಗೂ ಮುಂದಿನ ರವಾನೆಗಾಗಿ ಹಾಗೂ ಅದರ ಅನುಸರಣೆಯನ್ನು ದೃಢಪಡಿಸಲು, ಎಲ್ಲಾ ಉಚ್ಚ ನ್ಯಾಯಾಲಯಗಳ ರಿಜಿಸ್ಟ್ರಾರ್ ಜನರಲ್ರವರಿಗೆ ಕಳುಹಿಸಬೇಕೆಂದು ನಾವು ನಿರ್ದೇಶಿಸುತ್ತೇವೆ.

14. ದಿನಾಂಕ 31.10.2013 ರ ಆದೇಶದ ಮೂಲಕ ಈ ನ್ಯಾಯಾಲಯವು, ಕೆಲವು ಷರತ್ತುಗಳ ಮೇಲೆ, ಅಪೀಲುದಾರನಿಗೆ ತಾತ್ಕಾಲಿಕ ಜಾಮೀನು ನೀಡಿದೆ.ನಾವು ಈ ಆದೇಶವನ್ನು ಸಂಪೂರ್ಣಗೊಳಿಸುತ್ತೇವೆ.

15. ಇದರ ಫಲಿತವಾಗಿ, ಮೇಲೆ ಹೇಳಿದ ನಿರ್ದೇಶನಗಳೊಂದಿಗೆ, ಮೇಲೆ ಹೇಳಿದ ದಿನಾಂಕ 31.10.2013 ರ ನಮ್ಮ ಆದೇಶವನ್ನು ಸಂಪೂರ್ಣಗೊಳಿಸಿ, ನಾವು ಈ ಅಪೀಲನ್ನು ಪುರಸ್ಕರಿಸುತ್ತೇವೆ.